ಖಾಸಗಿ ವಲಯಕ್ಕೆ ಕೆಲವು ವಾಹನ ಮಾರ್ಗಗಳನ್ನು ಸರ್ಕಾರ ವಹಿಸಲು ನಿರ್ಧರಿಸಿರುವ ಬಗ್ಗೆ

416 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜ್ ನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಖಾಸಗೀ ವಲಯಕ್ಕೆ ಕೆಲವು ವಾಹನ ಮಾರ್ಗಗಳನ್ನು ಸರ್ಕಾರ ವಹಿಸಲು ನಿರ್ಧರಿಸಿದೆಯೇ?

ಆ) ಈ ರೀತಿ ವಹಿಸುವುದರಿಂದ ರಾಷ್ಟ್ರೀಕರಣ ಉದ್ದೇಶಕ್ಕೆ ಧಕ್ಕೆ ಆಗುವುದಿಲ್ಲವೇ?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಬಸ್ ದರ ಏರಿಸಲು ಸರ್ಕಾರದ ತೀರ್ಮಾನ

417 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸ್ ದರ ಏರಿಸಲು ಸರ್ಕಾರ ಯಾವ ಕಾರಣದಿಂದ ತೀರ್ಮಾನ ಕೈಗೊಂಡಿದೆ?

ಆ) ಯಾವುದೇ ವೈಜ್ಞಾನಿಕ ಆಧಾರವಿಲ್ಲದೆ ಬಸ್ ದರ ಏರಿಸುತ್ತಾ ಹೋಗುವುದು ಸರಿಯೇ?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಪ್ರತಿ ಮೂರು ವರ್ಷಗಳಿಗೊಮ್ಮೆ ಬಸ್ ದರಗಳನ್ನು ಪರಷ್ಕರಿಸುವುದು ಸಾಮಾನ್ಯ ವಾಡಿಕೆಯಾಗಿದ್ದರೂ ಐದು ವರ್ಷಗಳ ನಂತರ ಮೇ 1990ರಲ್ಲಿ ಬಸ್ ದರಗಳನ್ನು ಪರಿಷ್ಕರಿಸಲಾಯಿತು. ಇದಕ್ಕೂ ಮುನ್ನ 2.12.1985ರಲ್ಲಿ ಬಸ್ ದರಗಳ ಪರಿಷ್ಕರಣವಾಗಿತ್ತು. 2.10.85ರಿಂದ 6-5-90ರ ಅವಧಿಯಲ್ಲಿ ನಿರ್ವಹಣಾ ವೆಚ್ಚದಲ್ಲಿ ಶೇಕಡಾ 31.1 ರಷ್ಟು ಹೆಚ್ಚಳವಾಯಿತು. ಈ ಹೆಚ್ಚಳಕ್ಕೆ ವಿರುದ್ಧವಾಗಿ ಬಸ್ ದರಗಳನ್ನು ದಿನಾಂಕ 6.5.90ರಂದು ಶೇಕಡಾ 29.3 ರಷ್ಟನ್ನು ಹೆಚ್ಚಿಸಲಾಯಿತು. ಈ ಬಸ್ ದರಗಳಲ್ಲಿ ಆದ ಹೆಚ್ಚಳದ ನಂತರ ವಿವಿಧ ರಾಜಕೀಯ ಪಕ್ಷಗಳು ಮತ್ತು ಸಾರ್ವಜನಿಕ ಸಾಮಾನ್ಯರಿಂದ ಬಲದ ಒತ್ತಡದಿಂದಾಗಿ ಬಸ್ ದರದ ಹೆಚ್ಚಳವನ್ನು ಶೇಕಡಾ 26.4 ಕ್ಕೆ ಇಳಿಸಲಾಯಿತು. ಕೊಲ್ಲಿ ಯುದ್ಧದ ಪ್ರಯುಕ್ತ ಶೇಕಡಾ 25ರಷ್ಟು ಸರ್ ಚಾರ್ಜನ್ನು ಭಾರತ ಸರ್ಕಾರ ದಿನಾಂಕ 15-10-1990ರಿಂದ ವಿಧಿಸಿದ್ದರಿಂದ ಡಿಸೈಲ್ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳಲ್ಲಿ ಏರಿಕೆಯುಂಟಾದ ಕಾರಣ, ವಾಹನಗಳ ಇತರೆ ವಸ್ತುಗಳು ಅಂದರೆ ಬಿಡಿ ಭಾಗಗಳು ಮತ್ತು ಒಟ್ಟುಗೂಡಿಸುವಿಕೆ ಟೈರುಗಳು, ಗ್ರೀಸ್, ಕೀಲೆಣ್ಣೆ ಇತ್ಯಾದಿಗಳ ದರದಲ್ಲಿ ಹೆಚ್ಚು ಉಂಟಾಯಿತು. ಸಿಬ್ಬಂದಿಗೆ ಹೆಚ್ಚುವರಿ ತುಟ್ಟಿಭತ್ಯದ ಕಂತಿನಲ್ಲಿಯೂ ಸಹ ಹೆಚ್ಚಳವಾಯಿತು. ಈ ಹೆಚ್ಚಳವು ಶೇಕಡಾ 20.47 ಆಗಿದೆ.

ಇದಲ್ಲದೇ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವಿದ್ಯಾರ್ಥಿಗಳು, ಹಿರಿಯ ಪ್ರಜೆಗಳು, ದೈಹಿಕ ದುರ್ಬಲರು, ಕುಕುಡರು, ಇತ್ಯಾದಿಗಳಿಗೆ ರಿಯಾಯಿತಿಗಳನ್ನು ನೀಡುತ್ತಿರುವುದರಿಂದ 1991-92ರ ಒಂದೇ ವರ್ಷದಲ್ಲಿ ಆಗತಕ್ಕಂತಹ ಅಂದಾಜು ನಷ್ಟ 73 ಕೋಟಿ ರೂ.ಗಳು ಅಲ್ಲದೇ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು